ನಮೂನೆ - IX

ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

# ಒಪ್ಪಂದದ ನಿವೇದನೆಯನ್ನು ರದ್ದುಗೊಳಿಸುವ ಬಗ್ಗೆ ತಿಳಿವಳಿಕೆ ಪತ್ರ

**ಕ.ವಿ.ನಿ.ಆಯೋಗದ ಸರಬರಾಜು ಷರತ್ತುಗಳ ಕಲಮು 32.07ರ ಅಡಿಯಲ್ಲಿ**

ಶ್ರೀ/ಶ್ರೀಮತಿ........................................
...........................................................
...........................................................
...........................................................

ತಮ್ಮ ಸ್ಥಾಪನದ (ಆರ್.ಆರ್. ಸಂಖ್ಯೆ ..........................................., ಲೆಕ್ಕ ಖಾತೆ ಗುರುತು ಸಂಖ್ಯೆ.............................................) ಲೆಕ್ಕದಲ್ಲಿ ವಿದ್ಯುತ್ ಬಳಕೆ ಶುಲ್ಕ ರೂ............................ (ರೂ....................................................................) ಪಾವತಿಸದ ಕಾರಣ ಬಾಕಿ ಇದೆ ಎಂದು ತಿಳಿದುಬಂದಿದೆ. ಬಾಕಿಯನ್ನು ಪಾವತಿಸದ ಕಾರಣ ನಿಯಮಗಳ ಪ್ರಕಾರ ತಮ್ಮ ಸ್ಥಾಪನವು ವಿದ್ಯುತ್ ಸರಬರಾಜು ಸಂಪರ್ಕ ಕಡಿತದಲ್ಲಿದ್ದು/ ಇನ್ನೂ ಕಡಿತಗೊಂಡಿಲ್ಲದ ಕಾರಣ, ಈ ತಿಳಿವಳಿಕೆ ಪತ್ರವನ್ನು ಸ್ವೀಕರಿಸಿದ 7 ದಿನಗಳೊಳಗೆ ಸದರಿ ಮೊಬಲಗನ್ನು ಪಾವತಿಸತಕ್ಕದ್ದು. ಪಾವತಿಸಲು ವಿಫಲರಾದಲ್ಲಿ, ಈ ತಿಳಿವಳಿಕೆ ಪತ್ರವು ಜಾರಿಗೊಂಡ ದಿನಾಂಕದಿಂದ 3 ತಿಂಗಳುಗಳ ಅವಧಿಯ ನಂತರ ತಾವು ಈಗಾಗಲೇ ಮಾಡಿಕೊಂಡಿರುವ ಒಪ್ಪಂದದ ನಿವೇದನೆಯನ್ನು ರದ್ದುಗೊಳಿಸಲಾಗುತ್ತದೆ ಹಾಗೂ ಈ ತಿಳಿವಳೀಕೆ ಪತ್ರ ಜಾರಿಗೊಂಡಿರುವ ಅವಧಿಗೆ ನಿಗದಿತ ಶುಲ್ಕ ಹಾಗೂ ಬೇಡಿಕೆ ಶುಲ್ಕಗಳನ್ನು ಪಾವತಿಸಬೇಕಾಗುತ್ತದೆ. ವಿದ್ಯುತ್ ಸರಬರಾಜು ಷರತ್ತುಗಳ ಕಲಮು 41ರ ಪ್ರಕಾರ ತಮ್ಮ ಸ್ಥಾಪನದ ಲೆಕ್ಕದಲ್ಲಿ ಇರುವ ಬಾಕಿ ಶುಲ್ಕವನ್ನು ವಸೂಲಿ ಮಾಡುವ ಪ್ರಕ್ರಿಯೆಯ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್
(ಮೊಹರಿನ ಸಹಿತ)

ಹೆಸರು:

ದಿನಾಂಕ:

## ಸಾಮಾನ್ಯ ಸೂಚನೆಗಳು

1. ಯಾವುದೇ ಸ್ಥಾಪನವು ವಿದ್ಯುತ್ ಬಳಕೆ ಶುಲ್ಕದ ಅಪಾವತಿಗಾಗಿ ಮೂರು ತಿಂಗಳುಗಳಿಗೂ ಕಡಿಮೆ ಇಲ್ಲದ ಅವಧಿಗೆ ವಿದ್ಯುತ್ ಸರಬರಾಜು ನಿಲುಗಡೆಯ ಕ್ರಮಕ್ಕೆ ಒಳಗಾಗಿದ್ದರೆ, ಉಪ ವಿಭಾಗದ ಅಧಿಕಾರಿಯು ಆ ಸ್ಥಾಪನದ ಗ್ರಾಹಕರಿಗೆ ಮೂರು ತಿಂಗಳುಗಳ ಅವಧಿಯ ತಿಳಿವಳಿಕೆ ಪತ್ರವನ್ನು ಜಾರಿಮಾಡಿ, ವಿದ್ಯುತ್ ಬಳಕೆ ಶುಲ್ಕದ ಬಾಕಿಯನ್ನು ಪಾವತಿಸಿ ವಿದ್ಯುತ್ ಸರಬರಾಜನ್ನು ಪುನಃ ಪಡೆದುಕೊಳ್ಳಬೇಕೆಂದೂ, ತಪ್ಪಿದಲ್ಲಿ ತಿಳಿವಳಿಕೆ ಪತ್ರದ ಅವಧಿಯು ಮುಗಿದ ಕೂಡಲೇ ಸ್ಥಾಪನದ ವಿದ್ಯುತ್ ಸರಬರಾಜು ಒಪ್ಪಂದದ ನಿವೇದನೆಯು ರದ್ದಾಗಿದೆ ಎಂದು ಭಾವಿಸಲಾಗುತ್ತದೆಂದು ತಿಳಿಸತಕ್ಕದ್ದು.
2. ಯಾವುದೇ ಸ್ಪಷ್ಟೀಕರಣಕ್ಕಾಗಿ ಸಂಬಂಧಿತ ಉಪ ವಿಭಾಗ ಕಚೇರಿಯನ್ನು ಸಂಪರ್ಕಿಸಿ.

ವಿದ್ಯುಚ್ಛಕ್ತಿ ಸಂಬಂಧವಾದ ಯಾವುದೇ ದೂರುಗಳು/ಸಲಹೆಗಳಿಗೆ ದಯವಿಟ್ಟು ಚಾ.ವಿ.ಸ.ನಿ.ನಿ. ಸಹಾಯವಾಣಿ ಸಂಖ್ಯೆ 1912 ಅನ್ನು ಸಂಪರ್ಕಿಸಿ.

ಚಾ.ವಿ.ಸ.ನಿ.ನಿ. ಜಾಲತಾಣ ವಿಳಾಸ www.cescmysore.org ಕ್ಕೆ ಭೇಟಿ ನೀಡಿ.